**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 231/2022

**ಸಾಕ್ಷಿಯನ್ನು ದಿನಾಂಕ 16.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕಲ್ಪನ | ಪಿ.ಡಬ್ಲ್ಯೂ-16 |
| ತಂದೆಯ/ಗಂಡನ ಹೆಸರು | : | ವಿಜಯಕುಮಾರ್ | ಸಿ.ಡಬ್ಲ್ಯೂ-14 |
| ವಯಸ್ಸು | : | 43 | |
| ಉದ್ಯೋಗ | : | ಗೃಹಿಣಿ | |
| ವಾಸ ಸ್ಥಳ | : | ನಾಗನಹಳ್ಳಿ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಚಾಸ 15 ನನ್ನ ಗಂಡ. ಚಾಸ 1, 11, 13 ರವರು ನನ್ನ ಅಕ್ಕಂದಿರುತ್ತಾರೆ. ಶಿವಕುಮಾರ ಮತ್ತು ಪ್ರದೀಪ ನನ್ನ ಅಕ್ಕನ ಮಕ್ಕಳಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರು ನನ್ನ ಅಣ್ಣನ ಹೆಂಡತಿ ಮತ್ತು ಮಕ್ಕಳಿರುತ್ತಾರೆ. ನನ್ನ ಅಣ್ಣ 14 ವರ್ಷದ ಹಿಂದೆ ಮರಣ ಹೊಂದಿರುತ್ತಾನೆ. ನನ್ನ ತಾಯಿ ನಂಜಮ್ಮಳು ಮೈಸೂರಿನ ಹೆಬ್ಬಾಳದ ಮನೆಯಲ್ಲಿ 2 ನೇ ಮಹಡಿಯಲ್ಲಿ ವಾಸವಿದ್ದರು. ನ್ಯಾಯಾಲಯದ ಮುಂದಿರುವ ಆರೋಪಿತರು ಅದೇ ಮನೆಯ 1 ನೇ

ಮಹಡಿಯಲ್ಲಿ ವಾಸವಿದ್ದರು ಮತ್ತು ಆ ಕಟ್ಟಡದ ನೆಲ ಮಹಡಿಯನ್ನು ಬಾಡಿಗೆಗೆ ನೀಡಿದ್ದರು. ನನ್ನ ತಾಯಿ ಮತ್ತು ಆರೋಪಿತರಗೂ ಮೊದಲಿನಿಂದಲೂ ಹೊಂದಾಣಿಕೆಯಾಗದ್ದರಿಂದ ಅವರು ಬೇರೆಯಾಗಿ ಇದ್ದರು. ನನ್ನ ತಾಯಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು ಹಾಗೂ ನಾವು ಸಹ ಅವರನ್ನು ನೋಡಿಕೊಳ್ಳುತ್ತಿದ್ದೆವು. ನನ್ನ ಅಣ್ಣ ಮರಣ ಹೊಂದಿದ ಬಳಿಕ ಆಸ್ತಿ ವಿಚಾರಕ್ಕೆ ಆರೋಪಿತರು ನನ್ನ ತಾಯಿ ಜೊತೆ ಜಗಳ ಮಾಡುತ್ತಿದ್ದರು ಮತ್ತು ಆ ಬಗ್ಗೆ ನನ್ನ ತಾಯಿ ನನ್ನ ಬಳಿ ಹೇಳುತ್ತಿದ್ದರು. ಆರೋಪಿತರು ನನ್ನ ಜೊತೆ ಹಾಗೂ ನನ್ನ ಅಕ್ಕಂದಿರ ಜೊತೆ ಚನ್ನಾಗಿರಲಿಲ್ಲ.

ದಿನಾಂಕ 3.10.2021ರಂದು ಮದ್ಯಾಹ್ನ 1.15 ರಿಂದ 1.30 ಗಂಟೆಗೆ ಶಿವಕುಮಾರನು ನನ್ನ ಗಂಡನಿಗೆ ಫೋನ್ ಮಾಡಿ ಅಜ್ಜಿ ಮನೆ ಒಳಗಡೆ ಮಲಗಿದ್ದಾರೆ, ಕಿಟಕಿ ಗಾಜು ಒಡೆದಿದೆ, ಎಷ್ಟು ಎಬ್ಬಿಸಿದರೂ ಏಳುತ್ತಿಲ್ಲ ಬನ್ನಿ ಎಂದು ಹೇಳಿದ. ಶಿವಕುಮಾರನಿಗೆ ಆ ಬಗ್ಗೆ ಬಸವಣ್ಣಚಾರಿ ಹೇಳಿದ. ಆ ದಿನ ಅಂದಾಜು 2-2.30 ಗಂಟೆಗೆ ನಾವು ನನ್ನ ತಾಯಿ ಮನೆ ಬಳಿ ಹೋದೆವು. ನಾವು ಹೋದಾಗ ಪದ್ಮ, ಪದ್ಮಳ ಗಂಡ ಹಾಗೂ ಮಕ್ಕಳು ಇದ್ದರು. ನಾವು ಹೋದ ಬಳಿಕ ಅಂದಾಜು 3.30 ಗಂಟೆಗೆ ಸಣ್ಣಸೋಮಚಾರಿ ಮತ್ತು ಅವರ ಹೆಂಡತಿ ಮಕ್ಕಳು ಅಲ್ಲಿಗೆ ಬಂದರು. ನಾವು ನೋಡಿದಾಗ ನನ್ನ ತಾಯಿ ಮನೆಯ ಡೋರ್ ಲಾಕ್ ಆಗಿತ್ತು, ಕಿಟಕಿ ಗಾಜು ಒಡೆದಿತ್ತು. ನಾವು ಕಿಟಕಿಯಿಂದ ನೋಡಿದಾಗ ನನ್ನ ತಾಯಿ ಮಲಗಿದ್ದರು,

ಕೂಗಿದಾಗ ನನ್ನ ತಾಯಿ ಎದ್ದೇಳಲಿಲ್ಲ. ಆ ಕಾಲಕ್ಕೆ ಪ್ರದೀಪನು ಬಾಗಿಲನ್ನು ಒಡೆದನು. ಆಗ ಎಲ್ಲರೂ ಒಳ ಹೋಗಿ ನೋಡಿದಾಗ ನನ್ನ ತಾಯಿಯ ಕತ್ತು, ಕೈ, ಕಾಲು ಮತ್ತು ತಲೆಗೆ ಗಾಯವಾಗಿತ್ತು ಮತ್ತು ಅವರು ಮರಣ ಹೊಂದಿದ್ದರು. ಆ ಕಾಲಕ್ಕೆ ನನ್ನ ಅಕ್ಕ ಪದ್ಮ ಪೋಲಿಸರಿಗೆ ದೂರು ನೀಡಿದರು.

ನ್ಯಾಯಾಲಯದ ಮುಂದಿರುವ ಆರೋಪಿತರು ನನ್ನ ತಾಯಿಯನ್ನು ಹೊಡೆದು ಸಾಯಿಸಿದ್ದಾರೆ ಎಂದು ಪೋಲಿಸರು ವಿಚಾರಣೆ ಮಾಡಿದಾಗ ಗೊತ್ತಾಯಿತು. ಆರೋಪಿತರೇ ಹೊಡೆದು ಕೊಲೆ ಮಾಡಿರುವುದಾಗಿ ಹೇಳಿದರು. ನನ್ನ ತಾಯಿಯ ಕೈಕಾಲನ್ನು ಕಟ್ಟಿ ಮುಖಕ್ಕೆ ಪ್ಲಾಸ್ಟಿಕ್ ಕವರನ್ನು ಹಾಕಿ ತಲೆಗೆ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿರುವುದಾಗಿ ಅವರೇ ಹೇಳಿದರು. ವಿಚಾರಣೆ ಕಾಲಕ್ಕೆ ನಾನು 2 ಬಾರಿ ಠಾಣೆಗೆ ಹೋಗಿರುತ್ತೇನೆ ಮತ್ತು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್.ಎನ್.ಆರ್ ವಕೀಲರಿಂದಃ**

ನಾನು 7 ನೇ ತರಗತಿ ಓದಿರುತ್ತೇನೆ. ನಾನು ನಂಜಮ್ಮಳ ಕೊನೆ ಮಗಳಿರುತ್ತೇನೆ. ನನ್ನ ಮದುವೆಯನ್ನು ನನ್ನ ಅಣ್ಣನೇ ಮಾಡಿದ್ದಾನೆ ಎಂದರೆ ನನ್ನ ತಾಯಿ ಮತ್ತು ಅಣ್ಣ ಸೇರಿ ಮಾಡಿದ್ದಾರೆ. ಮದುವೆ ಬಳಿಕ ನಾನು ನನ್ನ ಗಂಡನ ಮನೆಯಲ್ಲಿ ವಾಸವಿದ್ದೆ ಎಂದರೆ ನಿಜ. ನನ್ನ ತಾಯಿಗೆ 75 ವರ್ಷ ವಯಸ್ಸಾಗಿತ್ತು

ಎಂದರೆ ನಿಜ. ನನ್ನ ತಾಯಿಯನ್ನು ಆರೋಪಿತರು ಚನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯ ಎಲ್ಲ ಅವಶ್ಯಕತೆಗಳನ್ನು ಆರೋಪಿತರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಗೆ ವಯಸ್ಸಾಗಿದ್ದರಿಂದ ಅವರಿಗೆ ಯಾವುದೇ ಕೆಲಸ ಮಾಡಲಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ದರಸಗುಪ್ಪೆಯ ಮನೆ ಮಾರಿ ಬಂದ ಹಣವನ್ನು ನಂಜಮ್ಮಳು ಎಲ್ಲ ಮಕ್ಕಳಿಗೆ ಸಮನಾಗಿ ಹಂಚಿದ್ದರು ಎಂದರೆ ಸರಿಯಲ್ಲ. ನಾವು ಹಣ ಪಡೆದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಬ್ಬಾಳದ ಮನೆಯನ್ನು ಸಿದ್ದಚಾರಿ ತನ್ನ ಪಾಲಿನ ಹಣದಿಂದ ಹಾಗೂ ತನ್ನ ಸ್ವಂತ ಸಂಪಾದನೆಯಿಂದ ಕಟ್ಟಿಸಿದ್ದ ಎಂದರೆ ಸರಿಯಲ್ಲ. ಸಿದ್ದಚಾರಿಯು ತನ್ನ ತಾಯಿ ಚನ್ನಾಗಿರಲೆಂದು ಮೇಲ್ಗಡೆ ಒಂದು ರೂಂ ಕಟ್ಟಿಸಿದ್ದ ಎಂದರೆ ಸರಿಯಲ್ಲ. ಸಿದ್ದಚಾರಿಯ ಮರಣದ ಬಳಿಕ ಆರೋಪಿತರು ನನ್ನ ತಾಯಿಗೆ ಎಲ್ಲ ಸೌಕರ್ಯ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಂಜಮ್ಮಳ ಎಲ್ಲ ಖರ್ಚು ವೆಚ್ಚವನ್ನು ಆರೋಪಿತರು ಭರಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಯಾವತ್ತೂ ನನ್ನ ತಾಯಿಗೆ ಹೋಗುತ್ತಿರಲಿಲ್ಲ ಎಂದರೆ 10 ವರ್ಷಗಳಿಂದ ಹೋಗುತ್ತಿರಲಿಲ್ಲ, ಆದರೆ ನನ್ನ ತಾಯಿಯೇ ನಮ್ಮ ಮನೆಗೆ ಬರುತ್ತಿದ್ದರು. ನನ್ನ ತಾಯಿ ಯಾವತ್ತೂ ನನ್ನ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರಿಯರು ಆರೋಪಿತರ ಮನೆಯಲ್ಲಿ ಪಾಲು ಬೇಕೆಂದು ಅಲ್ಲಿಗೆ ಹೋಗಿ ಜಗಳ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಆ ರೀತಿ ನನ್ನ ತಾಯಿ ಬಳಿ ಸಹ ಜಗಳ

ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ದಿನಾಂಕ 9.2.2012 ರಂದು 4 ನೇ ಆರೋಪಿ ನಾಗಮ್ಮಳು ನನ್ನ ತಾಯಿಯ ಭವಿಷ್ಯಕ್ಕಾಗಿ ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕಿನಲ್ಲಿ 49 ಸಾವಿರ ಹಣವನ್ನು ಠೇವಣಿ ಇಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಠೇವಣಿ ಹಣಕ್ಕೆ 3 ನೇ ಆರೋಪಿಯಾದ ಸಿದ್ದರಾಜುನನ್ನು ನಾಮಿನಿ ಮಾಡಿದ್ದರು ಎಂದರೆ ಗೊತ್ತಿಲ್ಲ. ಆರೋಪಿತರಿಗೆ ಗೊತ್ತಾಗದಂತೆ ಆ ಹಣವನ್ನು ನಾನು ಮತ್ತು ನನ್ನ ಸಹೋದರಿಯರು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ತಾಯಿ ಮರಣ ಹೊಂದಿದ ದಿನ ಶಿವಕುಮಾರನು ನನ್ನ ಗಂಡನಿಗೆ ಫೋನ್ ಮಾಡಿ ಅಜ್ಜಿ ಏಳುತ್ತಿಲ್ಲ ಎಂದು ಹೇಳಿದರು. ಆ ಫೋನ್ ನಂಬರ್ ನನಗೆ ಗೊತ್ತಿಲ್ಲ. ಮದ್ಯಾಹ್ನ 1 ರಿಂದ 1.30 ಗಂಟೆಗೆ ಆ ಫೋನ್ ಬಂದಿತ್ತು. ಆ ಕೂಡಲೇ ಅವರು ನನಗೆ ವಿಷಯ ಹೇಳಿದರು. ವಿಷಯ ತಿಳಿದು ಅರ್ಧ-ಮುಕ್ಕಾಲು ಗಂಟೆಗೆ ನಾವು ಹೆಬ್ಬಾಳದ ಮನೆಗೆ ಹೋದೆವು. ನಾವು ಹೋದಾಗ ಅಲ್ಲಿ ಪದ್ಮ, ನಾಗಮ್ಮ, ನಿಂಗಚಾರಿ, ಶಿವಕುಮಾರ ಮತ್ತು ಪ್ರದೀಪ ಇದ್ದರು. ನಾವು ಹೋದಾಗ ನನ್ನ ತಾಯಿಯ ರೂಂ ಡೋರ್ ಲಾಕ್ ಹಾಕಿತ್ತು. ಆ ರೂಂ ಚಕ್ಕುಬಂದಿ ಹೇಳಲಾಗುವುದಿಲ್ಲ. ಲಾಕ್ ತೆಗೆಯುವವರೆಗೆ ರೂಂನಲ್ಲಿ ಏನಾಗಿತ್ತು ಎಂದು ಗೊತ್ತಿರಲಿಲ್ಲ. ನನ್ನ ತಾಯಿಗೆ ಕಿವಿ ಸರಿಯಾಗಿ ಕೇಳುತ್ತಿರಲಿಲ್ಲ ಹಾಗೂ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಈ ಮೊದಲು ಎಲ್ಲಿಯೂ ಹೇಳಿಕೆ

ನೀಡಿಲ್ಲ ಎಂದರೆ ಠಾಣೆಯಲ್ಲಿ ಬಿಟ್ಟರೆ ಬೇರೆ ಹೇಳಿಕೆ ನೀಡಿಲ್ಲ. ಪೋಲಿಸರಿಗೆ ಹೇಳಿಕೆ ಕೊಡುವಾಗ ನನಗೆ ನೋಟಿಸ್ ನೀಡಿದ್ದರು. 5 ಮತ್ತು 8 ನೇ ದಿನಾಂಕದಂದು ಹೇಳಿಕೆ ನೀಡಿರುತ್ತೇನೆ, ಆದರೆ ತಿಂಗಳು ಮತ್ತು ವರ್ಷ ಗೊತ್ತಿಲ್ಲ. ಆ ಕಾಲಕ್ಕೆ ನಾವು ಇನ್ಸಪೆಕ್ಟರ್ ರವರಿಗೆ ಹೇಳಿಕೆ ನೀಡಿರುತ್ತೇನೆ. ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಿದ್ದಚಾರಿಯ ಮನೆಯಲ್ಲಿ ಪಾಲು ಕೇಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ವಯಸ್ಸಾಗಿದ್ದರಿಂದ ರಾತ್ರಿ ವೇಳೆ ಬಿದ್ದು ಮಲಗಿದ್ದರು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು